[illegible]

## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3217/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 26/02/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಸುರೇಶ್ ರಾವ್ ಆರೂರು, 5-119, ಕರ್ಕಟೆ ಮನೆ, ನಡ್ಸಾಲು ಗ್ರಾಮ, ಪಡುಬಿದ್ರೆ, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಶ್ರೀ ಸುರೇಶ್ ರಾವ್ ಆರೂರು, 5-119, ಕರ್ಕಟೆ ಮನೆ, ನಡ್ಸಾಲು ಗ್ರಾಮ, ಪಡುಬಿದ್ರೆ, ಉಡುಪಿ ಜಿಲ್ಲೆ ರವರು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ರಜತಾದ್ರಿ, 'ಸಿ' ಬ್ಲಾಕ್, ಮಣಿಪಾಲ್, ಉಡುಪಿ, ಉಡುಪಿ ಜಿಲ್ಲೆ ರವರ ವಿರುದ್ಧ ಆರೋಪಿಸಿ ಈ ಸಂಸ್ಥೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ. ಸದರಿ ದೂರಿನಲ್ಲಿ ಪಡುಬಿದ್ರೆಯ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ (ಪ್ರೌಢಶಾಲಾ ವಿಭಾಗ) ಸರ್ಕಾರದಿಂದ ಆರ್.ಎಂ.ಎಸ್.ಎ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಲಾಗಿದ್ದ ಅನುದಾನದ ಹಣವನ್ನು ಯಾವುದೇ ಮಂಜೂರಾತಿಯಿಲ್ಲದೆ ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಉಪನಿರ್ದೇಶಕರು, ದಿನಾಂಕ 15/04/2014 ರಂದು ಸಲ್ಲಿಸಿದ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ. ಆದರೆ, ಉಪನಿರ್ದೇಶಕರು, ಈವರೆಗೂ ಯಾವುದೇ ತನಿಖೆಯನ್ನು ಕೈಗೊಂಡಿರುವುದಿಲ್ಲ ಹಾಗೂ ಶಾಲಾ ಮುಖ್ಯೋಪಾಧ್ಯಾಯರಿಂದ ಹಣವನ್ನು ವಸೂಲಿ ಮಾಡಿರುವುದಿಲ್ಲ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುವುದಲ್ಲದೆ, ಹಣವನ್ನು ದುರುಪಯೋಗಪಡಿಸಿಕೊಳ್ಳಲು ಅನುವು ಮಾಡಿಕೊಟ್ಟಂತಾಗಿರುತ್ತದೆ. ಆದ್ದರಿಂದ, ಎದುರುದಾರರಾದ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ ಇವರು ಮೇಲೆ ಹೇಳಿದ ಅಪರಾಧದಲ್ಲಿ ತಮ್ಮ ಹಿತಾಸಕ್ತಿಗಾಗಿ ಸದರಿ ಅಪರಾಧದಲ್ಲಿ ಭಾಗಿಗಳಾದ ವ್ಯಕ್ತಿಗಳ ಮೇಲೆ ಕ್ರಮ ಜರುಗಿಸದೆ ಲೋಪವೆಸಗಿರುತ್ತಾರೆಂದು ಹೇಳಿ ಸಲ್ಲಿಸಿದ ದೂರಾಗಿರುತ್ತದೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರುದಾರರು ದೂರಿನೊಡನೆ ಮಾಹಿತಿ ಹಕ್ಕು ಅಧಿನಿಯಮದಡಿ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ ಇವರಿಂದ ಪಡೆದ ಮಾಹಿತಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ದೂರಿನೊಂದಿಗೆ ದಿ: 15/04/2014 ರಂದು ಎದುರುದಾರರು ನಡೆಸಿದ ತಪಾಸಣಾ ವರದಿಯ ಪ್ರತಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ "2009-10 ರಿಂದ 2013-14ನೇ ಸಾಲಿನ ಅವಧಿಯ ಆರ್.ಎಮ್.ಎಸ್.ಎ ಅನುದಾನದ ಬಳಕೆಯ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಿದ್ದು, ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಮುಖ್ಯ ಶಿಕ್ಷಕರಾದ ಶ್ರೀಮತಿ ಸಂಧ್ಯಾ ಸರಸ್ವತಿ, ಹಿರಿಯ ಪದವೀಧರ ಸಹಾಯಕರು ಮಾರ್ಗಸೂಚಿಯನ್ವಯ ಅನುದಾನವನ್ನು ಬಳಕೆ ಮಾಡದೆ ಲೋಪವೆಸಗಿರುವುದು ಕಂಡು ಬಂದಿರುತ್ತದೆ. ಅನುಮೋದನೆ ಪಡೆದುಕೊಳ್ಳುವ ಮೊದಲೇ ಖರ್ಚು ಮಾಡಿರುತ್ತಾರೆ. ಒಟ್ಟು ರೂ.27,802/- ರೂ.ಗಳ ವಸೂಲಾತಿಗೆ ಸೂಚಿಸಿದ್ದು, ಆಕ್ಷೇಪಣೆಯಲ್ಲಿರಿಸಿದ ಹಣ ರೂ.78,248/- ಗಳೆಂದು ನಮೂದಿಸಿ ಶ್ರೀ ನಾಗೇಂದ್ರ ಮಧ್ಯಸ್ಥ.ಎಸ್, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ರವರು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ವಸೂಲಾತಿಗೆ ಕ್ರಮ ಜರುಗಿಸದ ಕಾರಣ, ಫಿರ್ಯಾದುದಾರರು ದಿ: 19/09/2014 ರಂದು ದೂರು ಸಲ್ಲಿಸಿರುತ್ತಾರೆ.

3. ದಿನಾಂಕ 19/12/2015 ರಂದು ಶ್ರೀ ದಿವಾಕರ ಶೆಟ್ಟಿ. ಹೆಚ್, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ ರವರು ತಮ್ಮ ಪತ್ರದಲ್ಲಿ ದೂರಿನ ವಿಚಾರಕ್ಕೆ ಸಂಬಂಧಪಟ್ಟಂತೆ ಅನುದಾನ ದುರ್ಬಳಕೆ ವಿಚಾರವಾಗಿ ಮುಖ್ಯ ಶಿಕ್ಷಕರಿಗೆ ಆರೋಪಪಟ್ಟಿ 1 ರಿಂದ 4 ಜಾರಿಗೊಳಿಸಿ ಸಮಜಾಯಿಷಿ ಉತ್ತರವನ್ನು ಪಡೆದಿದ್ದು, ವಿಚಾರಣೆ ಪ್ರಗತಿಯಲ್ಲಿದ್ದು, ಮುಕ್ತಾಯವಾದ ಕೂಡಲೆ ತಿಳಿಸುವುದಾಗಿ ವರದಿ ಮಾಡಿರುತ್ತಾರೆ. ಅನುಬಂಧ 1 ರಿಂದ 4ರ ಪ್ರತಿಗಳನ್ನು, ಮುಖ್ಯ ಶಿಕ್ಷಕರು ನೀಡಿದ ಉತ್ತರದ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

4. ಫಿರ್ಯಾದುದಾರರು ಪ್ರತ್ಯುತ್ತರ ಸಲ್ಲಿಸಿದ್ದು, ಎದುರುದಾರರು ಆಂತರಿಕ ವಿಚಾರಣೆ ನಡೆಸಲು ವಿಳಂಬ ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆ ಸರ್ಕಾರಕ್ಕೆ ನಷ್ಟ ಉಂಟು ಮಾಡಿ, ಮುಖ್ಯ ಶಿಕ್ಷಕರಿಗೆ ಅನುಕೂಲ ಮಾಡಿರುವುದಾಗಿ, ಮುಖ್ಯ ಶಿಕ್ಷಕರಿಗೆ ಎದುರುದಾರರು ಕ್ರಮ ಜರುಗಿಸಿರುವುದಿಲ್ಲವೆಂದು ಆರೋಪಿಸಿರುತ್ತಾರೆ.

5. ಎದುರುದಾರರು ದಿನಾಂಕ 03/05/2017 ರಂದು ಮುಖ್ಯ ಶಿಕ್ಷಕರಿಗೆ 2ನೇ ಕಾರಣ ಕೇಳಿ ನೋಟೀಸು ನೀಡಿರುತ್ತಾರೆ. ಸದರಿ ಮುಖ್ಯ ಶಿಕ್ಷಕರು ದಿನಾಂಕ 17/04/2017 ರಂದು ಈ ಸಂಸ್ಥೆಗೆ ಪತ್ರ ಬರೆದಿದ್ದು, ಫಿರ್ಯಾದುದಾರರು ಮಾನಸಿಕವಾಗಿ ತೊಂದರೆ ನೀಡುತ್ತಿದ್ದಾರೆ, ನಮ್ಮ ಶಾಲೆಯಲ್ಲಿ

ಫಿರ್ಯಾದುದಾರರ ಪತ್ನಿ ಶಿಕ್ಷಕಿಯಾಗಿದ್ದು, ಇತರೆ ಪ್ರಮಾಣಿಕ ಸಿಬ್ಬಂದಿಗಳನ್ನು ಬೆದರಿಸುವುದು, ಗುಂಪುಗಾರಿಕೆ ಮಾಡುವುದರಲ್ಲಿ ತೊಡಗಿ ಶೈಕ್ಷಣಿಕ ವಾತಾವರಣ ಹಾಳು ಮಾಡಿರುತ್ತಾರೆ. ಫಿರ್ಯಾದುದಾರರ ವಿರುದ್ಧ ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ, ಪೊಲೀಸ್ ಇಲಾಖೆಯಲ್ಲಿ ದೂರು ದಾಖಲಿಸಿದ್ದೇನೆ. ಫಿರ್ಯಾದುದಾರರು ನನ್ನ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ನಮೂದಿಸಿರುತ್ತಾರೆ.

**6.** ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಪಡುಬಿದ್ರೆಯ ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ (ಪ್ರೌಢಶಾಲಾ ವಿಭಾಗ)ದ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸಂಧ್ಯಾ ಸರಸ್ವತಿ ರವರ ವಿರುದ್ಧ ದೂರಿನ ಆರೋಪಗಳ ಬಗ್ಗೆ ಎದುರುದಾರರು ಈಗಾಗಲೇ ಅನುಬಂಧ 1 ರಿಂದ 4 ನ್ನು ಜಾರಿಗೊಳಿಸಿ ಮುಖ್ಯ ಶಿಕ್ಷಕರಿಂದ ಉತ್ತರಗಳನ್ನು ಪಡೆದು 2ನೇ ತಿಳುವಳಿಕೆ ನೋಟೀಸನ್ನು ನೀಡಿ ಇಲಾಖಾ ವಿಚಾರಣೆಗೆ ಕ್ರಮ ಜರುಗಿಸಿದ್ದು, ಸದರಿ ಇಲಾಖಾ ವಿಚಾರಣೆಯನ್ನು ಶೀಘ್ರವಾಗಿ ಮುಕ್ತಾಯ ಮಾಡಿ ಆರೋಪಗಳು ರುಜುವಾತಾದಲ್ಲಿ ದುರುಪಯೋಗಪಡಿಸಿದ ಪೂರ್ಣ ಮೊತ್ತವನ್ನು ಸದರಿ ಮುಖ್ಯ ಶಿಕ್ಷಕರಿಂದ ವಸೂಲು ಮಾಡಿ ವರದಿ ಸಲ್ಲಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಒಂದು ತಿಂಗಳೊಳಗೆ ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಈ ಸಂಸ್ಥೆಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 24/7/18

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**